ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951
भारतीय मानक ब्यूरो IS / ISO 9001:2008 Bureau of Indian Standards QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ ಸಿಬ್ಬಂ/987/2018-19
Ref. No. KSFC/H.O./

ದಿನಾಂಕ :
Date 19/11/2018

<u>ಆಂತರಿಕ ಕಛೇರಿ ಟಿಪ್ಪಣಿ</u>

ವಿಷಯ: ಪ್ರಧಾನ ಕಛೇರಿಯ ವರ್ಗಾವಣೆ/ ನಿಯೋಜನೆ ಆದೇಶದನ್ವಯ, ಶಾಖಾ ಕಛೇರಿ/ ಪ್ರ.ಕ. ವಿಭಾಗಗಳಿಂದ ಬಿಡುಗಡೆಗೊಳಿಸಿದ ಹಾಗೂ ವರದಿ ಮಾಡಿಕೊಂಡ ಮಾಹಿತಿಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸುವ ಕುರಿತಂತೆ.

*~*~*

ಸಂಸ್ಥೆಯಲ್ಲಿ ವರ್ಗಾವಣೆಗೊಂಡ/ ನಿಯೋಜನೆ ಮೇಲೆ ಕಳುಹಿಸುವ ಉದ್ಯೋಗಿಗಳನ್ನು ಶಾಖಾ ಕಛೇರಿ/ ವಿಭಾಗದ ಸೇವೆಯಿಂದ ಬಿಡುಗಡೆಗೊಳಿಸಿದ ಮತ್ತು ವರದಿ ಮಾಡಿಕೊಂಡ ಮಾಹಿತಿಯನ್ನು ಪ್ರಸ್ತುತ ಶಾಖಾ ಕಛೇರಿ/ ವಿಭಾಗದಿಂದ ಮಾಹಿತಿ ಬಂದ ನಂತರ ಪ್ರಧಾನ ಕಛೇರಿಯ ಸಿಬ್ಬಂದಿ ವಿಭಾಗದಲ್ಲಿ ಹೆಚ್‌ಆರ್‌ಎಂಎಸ್ ನಲ್ಲಿ ದಾಖಲಿಸಲಾಗುತ್ತಿದೆ. ಆದರೆ, ಕೆಲವು ಸಂದರ್ಭಗಳಲ್ಲಿ ವರ್ಗಾವಣೆಯಾಗಿ ಶಾಖೆಯಿಂದ ಬಿಡುಗಡೆಗೊಳಿಸಿದ ಮತ್ತು ವರ್ಗಾವಣೆಗೊಂಡ ಶಾಖೆಯಲ್ಲಿ ವರದಿ ಮಾಡಿಕೊಂಡ ಮಾಹಿತಿಗಳು ಶಾಖೆಗಳಿಂದ ಬಾರದಿದ್ದ ಪ್ರಯುಕ್ತ ಸಿಬ್ಬಂದಿ ವಿಭಾಗದ ಹೆಚ್‌ಆರ್‌ಎಂಎಸ್ ನಲ್ಲಿ ದಾಖಲಿಸಲು ಸಾಧ್ಯವಾಗುತ್ತಿಲ್ಲ. ಇದ್ದಲ್ಲದೆ ಕೆಲವು ಉದ್ಯೋಗಿಗಳು ವರ್ಗಾವಣೆಗೊಂಡ ನಂತರ ಶಾಖಾ ಕಛೇರಿಯಿಂದ ಬಿಡುಗಡೆಗೊಂಡು ವರದಿ ಮಾಡಿಕೊಳ್ಳುವ ಶಾಖೆಯಲ್ಲಿ ವರದಿ ಮಾಡಿಕೊಳ್ಳದೇ ಅನಧಿಕೃತ ಗೈರು ಹಾಜರಾಗುತ್ತಿರುವುದು ಕಂಡು ಬಂದಿರುತ್ತದೆ. ಈ ನ್ಯೂನತೆಯನ್ನು ಸರಿಪಡಿಸುವ ಸಂಬಂಧ ಇನ್ನು ಮುಂದೆ ಪ್ರಧಾನ ಕಛೇರಿ ಸಿಬ್ಬಂದಿ ವಿಭಾಗದಿಂದ ಹೊರಡಿಸುವ ವರ್ಗಾವಣೆ/ ನಿಯೋಜನೆ ಆದೇಶದನ್ವಯ ಶಾಖಾ ಕಛೇರಿ/ ವಿಭಾಗಗಳ ಸೇವೆಯಿಂದ ಬಿಡುಗಡೆಗೊಂಡ ಮಾಹಿತಿಯನ್ನು ದಾಖಲಿಸುವ ಮತ್ತು ವರ್ಗಾವಣೆಗೊಂಡ ಸ್ಥಳಗಳಲ್ಲಿ ಉದ್ಯೋಗಿಗಳು ವರದಿ ಮಾಡಿಕೊಂಡ ವಿವರಗಳನ್ನು ಆಯಾ ಶಾಖಾ ಕಛೇರಿ/ ವಿಭಾಗಗಳಲ್ಲಿಯೇ ದಾಖಲಿಸುವ ವ್ಯವಸ್ಥೆಯನ್ನು ಮಾಹಿತ ತಂತ್ರಜ್ಞಾನ ವಿಭಾಗದವರು ಮಾಡಿರುತ್ತಾರೆ. ಈ ಸಂಬಂಧ ಪ್ರ.ಕ. ಮಾಹಿತಿ ತಂತ್ರಜ್ಞಾನ ವಿಭಾಗದವರು ಸಿದ್ಧಪಡಿಸಿರುವ ಕಾರ್ಯಸೂಚಿ ಈ ಕೆಳಗಿನಂತಿರುತ್ತದೆ.

**HRMS-Career-Transfer Detail**

*On relieving the employee, the respective relieving HoD/ BM has to update the relieving date. Consequent to reporting of the employee, the HoD/ BM at the reporting place should enter the reporting date. These updates has to be made using execute option in the below mentioned path.*

**Corp Menu-HRMS-Relieving Entry/ Reporting Entry.**

ಮುಂದುವರೆದಿದೆ/...

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು – 560 052
ದೂರವಾಣಿ ಸಂಖ್ಯೆ ಸಾಮಾನ್ಯ: 22263322 ಫ್ಯಾಕ್ಸ್: 080-22250126 ಇ-ಮೇಲ್ : info@ksfc.in ವೆಬ್ : www.ksfc.in
HEAD OFFICE : KSFC Bhavan, No. 1/1, Thimmaiah Road, Near Cantonment Railway Station, Bengaluru - 560 052
Telephone: Gen : 22263322 Fax : 080-22250126, e-mail : info@ksfc.in Website : www.ksfc.in

Continuation Sheet No.



ಸಂಸ್ಥೆಯಲ್ಲಿ ವರ್ಗಾವಣೆ/ ನಿಯೋಜನೆ ಸಂಬಂಧ ವರದಿಯನ್ನು ಸಿಬ್ಬಂದಿ ವಿಭಾಗದಲ್ಲಿ ಮಾತ್ರ ಪಡೆಯಲು ಸಾಧ್ಯವಿರುತ್ತದೆ ಮತ್ತು ವರ್ಗಾವಣೆಗೊಂಡು ಶಾಖಾ ಕಛೇರಿ/ ವಿಭಾಗಗಳಿಂದ ಬಿಡುಗಡೆಗೊಳಿಸಿದ ಹಾಗೂ ವರದಿ ಮಾಡಿಕೊಂಡ ಮಾಹಿತಿಗಳನ್ನು ದಾಖಲಿಸುವ ಕುರಿತಂತೆ ಯಾವುದಾದರೂ ಸಮಸ್ಯೆಗಳು ಉದ್ಭವಿಸಿದ್ದಲ್ಲಿ, ಪ್ರಧಾನ ಕಛೇರಿಯ ಮಾಹಿತಿ ತಂತ್ರಜ್ಞಾನ ವಿಭಾಗವನ್ನು ಸಂಪರ್ಕಿಸಿ ಸೂಕ್ತ ಸಲಹೆ ಸೂಚನೆಗಳನ್ನು ಪಡೆಯಲು ಈ ಮೂಲಕ ಸೂಚಿಸಲಾಗಿದೆ. ಈ ವ್ಯವಸ್ಥೆ ತಕ್ಷಣದಿಂದ ಜಾರಿಗೆ ಬರಲಿದ್ದು, ಎಲ್ಲಾ ಶಾಖಾ ಕಛೇರಿ ಹಾಗೂ ವಿಭಾಗ ಮುಖ್ಯಸ್ಥರುಗಳು ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ, ಇದಲ್ಲದೆ ಉದ್ಯೋಗಿಯ ಬಿಡುಗಡೆ/ ವರದಿ ಮಾಡಿಕೊಂಡ ವರದಿಗಳ ಪ್ರತಿಯನ್ನು ಕಡ್ಡಾಯವಾಗಿ ಸಿಬ್ಬಂದಿ ವಿಭಾಗಕ್ಕೆ ಕಳುಹಿಸತಕ್ಕದ್ದು ಮತ್ತು ವರದಿ ಮಾಡಿಕೊಳ್ಳದ ಉದ್ಯೋಗಿಗಳ ಹೆಸರುಗಳನ್ನೂ ಸಹ ಸಿಬ್ಬಂದಿ ವಿಭಾಗಕ್ಕೆ ತಕ್ಷಣ ತಿಳಿಸಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ಉಪ ಪ್ರಧಾನ ವ್ಯವಸ್ಥಾಪಕರು (ಸಿಪಿಐ)

ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಶಾಖಾ ಕಛೇರಿಗಳ ಮುಖ್ಯಸ್ಥರುಗಳಿಗೆ,
ಆ.ಲೆ.ಪ ಕೋಶ, ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು–I & II
ವ್ಯ.ನಿ. ರವರ ಕಾ.ನಿ ಸಹಾಯಕರಿಗೆ } ಮಾಹಿತಿಗಾಗಿ
ಹೆಚ್‌ಆರ್‌ಎಂಎಸ್, ಗ್ರಂಥಾಲಯ,
ಸೂಚನಾ ಫಲಕಕ್ಕೆ, ಕಛೇರಿ ಪ್ರತಿ